## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಮ್. ಎಫ್.ಸಿ ನ್ಯಾಯಾಲಯ
## ತಿ. ನರಸಿಪುರ
## ಸಿಸಿ ಸಂಖ್ಯೆ 189/2024

| | | |
|---|---|---|
| ಸಾಕ್ಷಿದಾರರ ಹೆಸರುಃ | ಶ್ರೀ ಮಲ್ಲಿಕಾ | ಪ್ರಮಾಣ ವಚನ ಬೋಧಿಸಲಾದ |
| ತಂದೆಯ ಹೆಸರುಃ | ಪುಟ್ಟಸ್ವಾಮಿ | ದಿನಾಂಕಃ 31.01.2025 |
| ವಯಸ್ಸು | 36 ವರ್ಷ | |
| ವೃತ್ತಿ | ಅಡುಗೆ ಕೆಲಸ | ಡಿ.ಡಬ್ಲೂಃ 1 |
| ವಾಸಃ | ಉಕ್ಕಲಗೆರೆ | |

**ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ ಬಿ.ಆರ್ ವಕೀಲರಿಂದಃ**

1. ಈ ಪ್ರಕರಣದ ಫಿರ್ಯಾದಿ ಯವರು ನನಗೆ ಗೊತ್ತು. ನಾನು ಮತ್ತು ಫಿರ್ಯಾಧಿಯು ಒಂದೇ ಗ್ರಾಮದವರು ಮತ್ತು ಸ್ನೇಹಿತರು. ನಾನು ಫಿರ್ಯಾದಿಯವರ ಬಳಿ ರೂ.10,000/- ಹಣವನ್ನು ಸಾಲವಾಗಿ ಕೇಳಿದ್ದೆನು. ಆ ಸಂದರ್ಭದಲ್ಲಿ ಫಿರ್ಯಾಧಿಯು ನಾನು ಹಣವನ್ನು ಕೊಡುತ್ತೇನೆ, ಆದರೆ ಸಾಕ್ಷಿಗಾಗಿ ಸಾಕ್ಷಿದಾರರನ್ನು ಕರೆದುಕೊಂಡು ಬನ್ನಿ ಎಂದು ತಿಳಿಸಿದರು. ನಂತರ ದಿನಾಂಕ 28.06.2018 ರಂದು ಫಿರ್ಯಾಧಿಯು ನನಗೆ ರೂ.10,000/- ಹಣವನ್ನು ಸಾಲವಾಗಿ ಕರ್ನಾಟಕ ಬ್ಯಾಂಕ್ ನ ಚೆಕ್ ಸಂ.512162 ರ ಮೂಲಕ ನಾಗೇಂದ್ರ ಮತ್ತು ರುದ್ರಸ್ವಾಮಿರವರ ಸಮಕ್ಷಮ ನೀಡಿದ್ದರು. ನಂತರ ಫಿರ್ಯಾಧಿಯು ಹಣವನ್ನು ವಾಪಸ್ಸು ಕೊಡುವಂತೆ ಕೇಳಿದ್ದರು. ಆದರೆ ಆಗ ನನಗೆ ಸ್ವಲ್ಪ ಹಣಕಾಸಿನ ಮುಗ್ಗುಟ್ಟು ಇದ್ದುದರಿಂದ ನಾನು ಸದರಿ ಹಣವನ್ನು ಸ್ವಲ್ಪ ದಿನಗಳ ನಂತರ ಕೊಡುತ್ತೇನೆ ಎಂದು ತಿಳಿಸಿದ್ದೆನು. ನಂತರ ನನಗೆ ಅಡುಗೆ ಮಾಡಲು ದೊಡ್ಡ ಆರ್ಡರ್ ಬಂದಿದ್ದರಿಂದ ಪುನಃ ರೂ.90,000/- ಹಣವನ್ನು ಸಾಲವಾಗಿ ಕೊಡುವಂತೆ ನಾನು ಫಿರ್ಯಾಧಿದಾರರಿಗೆ ಕೇಳಿಕೊಂಡೆನು. ಆಗ ಫಿರ್ಯಾದಿದಾರರು ಸದರಿ ಸಾಲವನ್ನು ಕೊಡುತ್ತೇನೆ, ಆದರೆ ಸದರಿ ಸಾಲದ ಭದ್ರತೆಗಾಗಿ ಚೆಕ್ ನ್ನು ನೀಡುವಂತೆ ಕೇಳಿದ್ದರು.

ನಂತರ ನಾನು ಫಿರ್ಯಾಧಿದಾರರಿಗೆ ಸಹಿ ಮಾಡಿದ್ದ ವಿಜಯ್ ಬ್ಯಾಂಕ್, ಕಗ್ಗಲೀಪುರ ಶಾಖೆಯ ಒಂದು ಚೆಕ್ಕನ್ನು ನಾಗೇಂದ್ರ ಮತ್ತು ರುದ್ರಸ್ವಾಮಿಯವರ ಸಮಕ್ಷಮ ನೀಡಿದ್ದೆನು. ಆಗ ಫಿರ್ಯಾಧಿದಾರರು ನಾನು ಕೇಳಿದ್ದ ರೂ.90,000/- ಹಣವನ್ನು ಸಾಲವಾಗಿ 3 ದಿನಗಳ ನಂತರ ಕೊಡುತ್ತೇನೆ ಎಂದು ನನಗೆ ತಿಳಿಸಿದ್ದರು. ನಂತರ ನಾನು ಎಷ್ಟೇ ಕೇಳಿದ್ದರೂ ಫಿರ್ಯಾಧಿದಾರರು ರೂ.90,000/- ಹಣವನ್ನು ಸಾಲವಾಗಿ ನನಗೆ ನೀಡಿರುವುದಿಲ್ಲ. ನಂತರ ನಾನು ಫಿರ್ಯಾಧಿದಾರರಿಗೆ ದೂರವಾಣಿ ಕರೆ ಮಾಡಿ ನನಗೆ ಈಗ ದುಡ್ಡಿನ ಅವಶ್ಯಕತೆ ಇಲ್ಲ, ನಾನು ನಿಮ್ಮ ಬಳಿ ಪಡೆದುಕೊಂಡಿರುವ ರೂ.10,000/- ಹಣವನ್ನು ವಾಪಸ್ಸು ಮಾಡಿ ಸದರಿ ಚೆಕ್ಕನ್ನು ವಾಪಸ್ಸು ಪಡೆದುಕೊಳ್ಳುತ್ತೇನೆ ಎಂದು ತಿಳಿಸಿದ್ದೆನು. ನಂತರ ಸುಮಾರು 1 ½ ತಿಂಗಳ ಬಳಿಕ ನಾನು ತಿ.ನರಸೀಪುರಕ್ಕೆ ಬಂದು ಫಿರ್ಯಾಧಿದಾರರನ್ನು ಭೇಟಿ ಮಾಡಿ ರೂ.10,000/- ಹಣವನ್ನು ವಾಪಸ್ಸು ಕೊಡುತ್ತೇನೆ ಚೆಕ್ ನ್ನು ವಾಪಸ್ಸು ಕೊಡಿ ಎಂದು ಕೇಳಿದ್ದೆನು. ಆಗ ಫಿರ್ಯಾಧಿದಾರರು ಮನೆಯನ್ನು ಸ್ವಚ್ಛಗೊಳಿಸುವಾಗ ಸದರಿ ಚೆಕ್ ನ್ನು ಎಲ್ಲೋ ಇಟ್ಟಿದ್ದೇನೆ, ಸದರಿ ಚೆಕ್ ಸಿಕ್ಕಿದ ತಕ್ಷಣ ನಿಮಗೆ ಕೊಡುತ್ತೇನೆ ಎಂದು ತಿಳಿಸಿದರು. ನಂತರ ಸದರಿ ವಿಚಾರವನ್ನು ನಾನು ನಾಗೇಂದ್ರರವರಿಗೂ ಸಹ ತಿಳಿಸಿದ್ದೆನು. ಸದರಿ ನಾಗೇಂದ್ರರವರು ಸಹ ಫಿರ್ಯಾಧಿದಾರರಿಗೆ ದೂರವಾಣಿ ಕರೆ ಮಾಡಿ ಸದರಿ ಚೆಕ್ಕನ್ನು ವಾಪಸ್ಸು ನೀಡುವಂತೆ ಕೇಳಿದ್ದರು. ನಂತರ ಫಿರ್ಯಾಧಿದಾರರು ಸದರಿ ಚೆಕ್ಕನ್ನು ಬ್ಯಾಂಕಿನಲ್ಲಿ ಹಾಜರುಪಡಿಸಿ ಬೌನ್ಸ್ ಮಾಡಿ ಈ ಪ್ರಕರಣವನ್ನು ದಾಖಲಿಸಿರುತ್ತಾರೆ. ಫಿರ್ಯಾಧಿದಾರರು ಹೇಳಿರುವಂತೆ ನಾನು ಸದರಿಯವರಿಂದ ರೂ.1,00,000/- ಹಣವನ್ನು ಸಾಲವಾಗಿ ಪಡೆದುಕೊಂಡಿರುವುದಿಲ್ಲ. ಹಾಗಾಗಿ ನಾನು ಫಿರ್ಯಾಧಿದಾರರಿಗೆ ರೂ.10,000/- ಹಣವನ್ನು ಮಾತ್ರ ಮರುಪಾವತಿಸುವ ಬಾಧ್ಯತೆ ಹೊಂದಿರುತ್ತೇನೆ. ಫಿರ್ಯಾಧಿದಾರರು ರೂ.90,000/- ಸಾಲವಾಗಿ ನೀಡುತ್ತೇನೆ ಎಂದು ಭರವಸೆ ನೀಡಿ ನನ್ನ ಬಳಿ ನಿಪಿ-1ರ ಚೆಕ್ಕನ್ನು ಪಡೆದುಕೊಂಡು ಸದರಿ ಚೆಕ್ಕನ್ನು

ದುರುಪಯೋಗಪಡಿಸಿಕೊಂಡು ಈ ಪ್ರಕರಣ ದಾಖಲಿಸಿರುತ್ತಾರೆ. ನಂತರ ಫಿರ್ಯಾಧಿದಾರರು ತಮ್ಮ ವಕೀಲರ ಮೂಲಕ ನನಗೆ ನೋಟಿಸ್ ನೀಡಿದ್ದರು. ಆಗ ನಾನು ಮತ್ತು ನಾಗೇಂದ್ರರವರು ಫಿರ್ಯಾಧಿದಾರರನ್ನು ಭೇಟಿ ಮಾಡಿ ಏಕೆ ನನ್ನ ಚೆಕ್ಕನ್ನು ನಗದೀಕರಣಕ್ಕಾಗಿ ಹಾಜರುಪಡಿಸಿದ್ದೀರಾ ಎಂದು ಕೇಳಿದ್ದಾಗ ಫಿರ್ಯಾಧಿದಾರರು ಬೇರೆ ಮಲ್ಲಿಕಾ ಎಂಬ ಹೆಸರಿನ ಚೆಕ್ಕನ್ನು ಹಾಜರುಪಡಿಸಲು ಹೋಗಿ ಕಣ್ಣ ತಪ್ಪಿನಿಂದ ನಿಮ್ಮ ಚೆಕ್ಕನ್ನು ಹಾಜರುಪಡಿಸಿದ್ದೇನೆ ಎಂದು ತಿಳಿಸಿದ್ದರು. ನಂತರ ನಾನು ಜೋರಾಗಿ ಫಿರ್ಯಾಧಿದಾರರೊಂದಿಗೆ ಮಾತನಾಡಿದ್ದಾಗ ಫಿರ್ಯಾಧಿದಾರರು ನನ್ನ ಬಳಿ ಮಾತನಾಡುವುದು ಏನು ಉಳಿದಿಲ್ಲ, ನೀನು ಏನಾದರೂ ಹೇಳುವುದು ಇದ್ದರೇ ನ್ಯಾಯಾಲಯದಲ್ಲಿ ಬಂದು ಹೇಳು ಎಂದು ತಿಳಿಸಿ ಗಲಾಟೆ ಮಾಡಿರುತ್ತಾರೆ. ನಾನು ಫಿರ್ಯಾಧಿದಾರರಿಂದ ರೂ.1,00,000/- ಹಣವನ್ನು ಸಾಲವಾಗಿ ಪಡೆದುಕೊಂಡಿರುವುದಿಲ್ಲ. ಹಾಗಾಗಿ ಈ ಪ್ರಕರಣವನ್ನು ವಜಾ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

(ಫಿರ್ಯಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲವಕಾಶ ಕೇಳಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಷ್ಯವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿರುತ್ತೇನೆ.)

ಓ.ಹೇ.ಕೇ.ಸ. ಇದೆ.,

**ಹೆಚ್ಚುವರಿ ಸಿ.ಜೆ ಮತ್ತು ಜೆ.ಎಮ್.ಎಫ್.ಸಿ**
**ನ್ಯಾಯಾಲಯ, ತಿ. ನರಸಿಪುರ**